Reg No. M 1299 SATYAVADI Founded 1927

ಸತ್ಯವಾದಿ

ಸಂಪುಟ 23 ಸಂಚಿಕೆ 103] ಬುಧವಾರ 17—2—1943 [ಪ್ರತಿಪ್ರತಿ 3 ಪೈ

ಮಹಾತ್ಮಾ ಗಾಂಧಿಯವರು

ಗಾಂಧೀಜಿಯವರ ದೇಹಸ್ಥಿತಿ ವಿಷಮಗೊಂಡಿದೆಯೆಂದೂ ಮುಂಬಯಿ ಸರ್ಕಾರದ ಸ್ಪೆಷಲಿಸ್ಟರವರೊಬ್ಬರು ಈ ದಿನ ಗಾಂಧೀಜಿಯವರನ್ನು ಪರೀಕ್ಷಿಸಿದರೆಂದು ತಿಳಿಯಬರುತ್ತೆ.

ನಿನ್ನೆ ದಿನದ ವರೆಗೂ ಗಾಂಧಿಯವರನ್ನು 6 ಮಂದಿ ಡಾಕ್ಟರುಗಳು ಪರೀಕ್ಷಿಸಿದರು. ಸಂತೋಷವಾಗಿಯೆಂದಿದ್ದರು ಮಕ್ಕಳು ದಾಕ್ಷತ್ರಗಳೊಡನೆ ಸಂಭಾಷಿಸಿದರು. ಹಾಸಿಗೆ ಮೇಲೆ ಸುಮಾರು ಕಾಲವೆಲ್ಲಾ ಕಳೆಯುತ್ತಿರುವರು. ಉಪವಾಸದಿಂದ ತೂಕ ಕಡಮೆಯಾಗಿದೆ.

ಅಸೆಂಬ್ಲಿಯಲ್ಲಿ ಅಮಸೆದ ತರಾವು ಚರ್ಚಿಸಲ್ಪಡುವಾಗ ಶ್ರೀ ಕೇಳ್ಕರರು ಗಾಂಧಿಯವರನ್ನು ಯಾವ ಪರಕ್ಕೂ ಇಲ್ಲದೆ ಒಡಬೇಕೆಂದು ಸರ್ ಸಪ್ರೂರವರು ನಾವು ಗಾಂಧಿಯನ್ನು ಸಾಯಲು ಬಿಡಲಾಗದೆಂದರು. ಮುಸ್ಲಿಂ ಲೀಗಿನ ಮೆಂಬರ್‌ಗಳು ಸಹಾನುಭೂತಿ ತೋರಿಸಿರುತ್ತಾರೆ.

ಗಾಂಧಿಯವರ ಜೀವವನ್ನು ಕಾಪಾಡಬೇಕೆಂದು ಶ್ರೀ ಡಲಾಲರು ಹೇಳಿರುವರು.

ದೇಶದ ಅನೇಕ ಸಂಸ್ಥೆಗಳೂ ಗಾಂಧೀಜಿಯವರು ಬಿಡುಗಡೆ ಮಾಡಲ್ಪಡಬೇಕೆಂದು ತರಾವು ಮಾಡಿದೆ.

ಜರ್ಮನ್ ಸೈನ್ಯದ ಮುಖ್ಯಾಧಿಪತ್ಯ ಹಿಟ್ಲರ್ ತ್ಯಜಿಸಿದನೇ?

ನಾಜೀ ಸೈನ್ಯದ ಸ್ಥಿತಿಗತಿಗಳೂ, ಎಲ್ಲಾ ಯುದ್ಧ ರಂಗಗಳಲ್ಲಿ ಜರ್ಮನರಿಗೆ ಒದಗುತ್ತಿರುವ ಸೋಲು ಹಿಟ್ಲರನು ಸೈನ್ಯದ ಮುಖ್ಯಾಧಿಪತ್ಯವನ್ನು ತ್ಯಜಿಸುವಂತೆ ಮಾಡಿರಬೇಕಲ್ಲವೆ.

ಟ್ಯುನಿಸಿಯಾದಲ್ಲಿ ಮಿತ್ರ ಮಂಡಲಿಯವನ್ನು ಮುನ್ನುಗ್ಗುತ್ತಿದ್ದಾರೆ.

ರಷ್ಯಾದವರು ಭಾರೀ ರಾಗೆನಲ್ಲಿ ಮುನ್ನುಗ್ಗುತ್ತ ನಾಜೀ ನಿಲ್ದಾಣಗಳ ಮೇಲೆ ಷೆಲ್ ಹೊಡೆಯುತ್ತಿದ್ದಾರೆ.

ಸಾಲೊಮನ್ ವಿಮಾನ ಯುದ್ಧದಲ್ಲಿ ಜಪಾನರ ಹನ್ನೊಂದು ವಿಮಾನಗಳನ್ನು ನಾಶಮಾಡಲಾಗಿದೆ.

ಸ್ಟಿಡ್ಜರ್ಲಿಂತಿನ ಮೇಲೆ ಪರದೇಶದ ವಿಮಾನಗಳು ಹಾರಾಡಿದವೆಂದು ಹೇಳಲಾಗಿದೆ.

ಬ್ರಹ್ಮ ದೇಶದ ಮೇಲೆ ಜಪಾನರ ನಿಷ್ಫಲ ಪ್ರತಿ ದಾಳಿ

ಬ್ರಹ್ಮದೇಶದೊಳಗಿನ ಡಾನ್ ಬಾಯಿಕ್ ರಾಧೆಡಾಂಗ ವಿಭಾಗದಲ್ಲಿ ಜಪಾನಿಯರ ಸೈನ್ಯವು ಹೆಚ್ಚಳವನ್ನು ಹೊಂದುತ್ತಲಿದೆ. ಆದರೆ ಅವರ ಪ್ರತಿ ಧಾಳಿಯು ನಿಷ್ಫಲವಾಗಿದ್ದು ಅವರು ಅತಿಶಯವಾದ ಹಾನಿಗೀಡಾಗಿದ್ದಾರೆಂದು ಹಿಂದೀ ಮಿಲಿಟರಿ ಖಾತೆಯ ಪ್ರಕಟನೆಯಲ್ಲಿ ಹೇಳಲಾಗಿದೆ.

ಹಿಂದೂ ಮುಖಂಡರ ಸಭೆ

ಮಹಾತ್ಮಾ ಗಾಂಧಿಯವರ ಉಪವಾಸದ ಪರಿಣಾಮವಾಗಿ ಉಂಟಾಗಿರುವ ಭಾರತದ ಸ್ಥಿತಿಯನ್ನು ಚರ್ಚಿಸಲು ಹಿಂದೂ ಮುಖಂಡರ ಸಮ್ಮೇಳನವು ನಾಳೆ ದೆಲ್ಲಿಯಲ್ಲಿ ನಡೆಯುವುದು. ಅನೇಕ ಪ್ರಮುಖರು ಆಹ್ವಾನಿಸಲ್ಪಟ್ಟಿದ್ದಾರೆ.

ಸಸ್ಪೆಂಡ್ ಆಯಿತು

ಚಿತ್ತಾರಿನ ಫ್ರೀಡಂ ಪಿ.ಆರ್. ಶ್ರೀನಿವಾಸಾಚಾರಿ ಎಂಬುವರನ್ನು ಮದರಾಸ್ ಹೈ ಕೋರ್ಟಿನವರು ಲೀಗಿನ ಪ್ರಾಕ್ಟಿಷನರ್ ಆಕ್ಟ್ ಪ್ರಕಾರ 2 ವರ್ಷ ಕಾಲ ಕೋರ್ಟು ಕೆಲಸ ನಡೆಸದಂತೆ ಸಸ್ಪೆಂಡ್ ಮಾಡಿದ್ದಾರೆ.

ಭಾರತದ ವಿಹಾರ ನಿಯಂತ್ರಣಕ್ಕೆ ಬ್ರಿಟಿಷ್ ಸಿಪುಣರ ಒದ್ದಿವಾದ ತೆಗೆದುಕೊಳ್ಳಲ್ಪಡಲಿದೆಯಂತೆ.

ಹಿಟ್ಲರಿನ ಹೊಸ ಆಟ

ಸುಮಾರು 10 ತಿಂಗಳುಗಳಿಂದ ಪ್ರಚ್ಛನ್ನವಾಗಿ ಪರ್ಷಿಯಾ ತ್ಯಾಗರಾವ್ ಹಿಟ್ಲರು ಕಾಲು ಸುಟ್ಟುಕೊಂಡ ಬೆಕ್ಕಿನಂತೆ ಇಂದು ತಳಮಳಿಸುತ್ತಿದ್ದಾನೆ. ಸ್ವಪಂಚಮಸ್ತೀ ಸಂಗಡಿಗರು ಬಾಸ ಊಪಿಸಿದ್ದರು. ಈಗ ಸ್ವತೀಕಾರ ದೇವತೆಯು ಹಿಡಿತಕ್ಕೆ ಸಿಕ್ಕಿರುವನು. ರಷ್ಯದಲ್ಲಿಯೂ ಉತ್ತರ ಆಫ್ರಿಕದಲ್ಲಿಯೂ ಸಜಯಗಳ ಪಾಲಾದನು. ಸಿರಂಕುಶತ್ವವನ್ನು ಜಲಾಯಿಸಿದ ಸರ್ವಾಧಿಕಾರಿಯಾದಂಥ ಪ್ರಜಾಭಿಪ್ರಾಯವನ್ನು ಉಲ್ಲಂಘಿಸಿ ಮನಸ್ಸುಗ್ಗಲಾಗದು ತನ್ನ ವ್ಯಾಂತ್ಯದವರೇ ತನಗೆ ಎದುರು ಬೀಳುವರೆಂಬ ಭಯವು ಅತನ ಹೃಡಯದಲ್ಲಿ ಬೆ. ಥಾವ ಯಾವುದೋ ಕಾರಣವನ್ನು ಹೇಳಿ ಉದ್ದೇಶ್ಯ ಸಿದ್ಧಿಗಾಗಿ ಹೊಸ ಹೊಸ ಹೊಸ ಸಂಚಿಕೆಗಳನ್ನು ಕೊಡುತ್ತಿರುವನು. ಮಿತ್ರರಾಜ್ಯಗಳಲ್ಲಿ ಮಿತ್ರಭೇದ ತಂತ್ರಗಳನ್ನು ಪ್ರವೇಶಗೊಳಿಸಲು ಯತ್ನಿಸುತ್ತಿರುವನು. ರಷ್ಯಾ ಯುದ್ಧದಿಂದ ಬ್ರಿಟನ್ನು ಅಮೇರಿಕಗಳು ವಿಶೇಷ ಯುದ್ಧಭಾರದಿಂದ ಪಾರಾದವೆಂದು 'ಆಂತರಂಗಿಕವಾಗಿ ಹಿಟ್ಲರು ಬಾಧೆ ಪಡುತ್ತಿರುವನು. ರಷ್ಯವನ್ನು ಬ್ರಿಟನ್ನಿನಿಂದ ಪ್ರತ್ಯೇಕಿಸಲು ಯತ್ನಿಸುತ್ತಿರುವನು. ರಷ್ಯಾದವರ ಬೋಲ್ಷೆವಿಜಂ ಪಶ್ಚಿಮ ಮುಖಂಡನನ್ನು ಮುಪ್ಪಾತಿರುವದು.

ಪ್ರವಾಹದಂತೆ ಮುಳುಗಿಸಿಬಿಡುವದೆಂದೂ ಹೀಗಾಗದಂತೆ ಮಾಡಲು ಯತ್ನಿಸಬೇಕೆಂದು ಹೇಳುತ್ತಿರುವನು. ತಾನೇ ಮಹಾನೇಧಾವಿಯೆಂದೂ ಅಜೇಯನೆಂದೂ ಗರ್ವಿಸಿ ತನ್ನ ಕಾಲಿಗೆ ತಾನೇ ಸಂಕೋಲೆ ಹಾಕಿಕೊಳ್ಳುತ್ತಿರುವನು.

ತನ್ನ ದೇಶಕ್ಕೇ ಮಹಾರಿಯಾಗಿ ಪರಿಣಮಿಸಿರುವನು. ಇವನ ಹಿಂದೆ ನಿಂತ ಗೋರಿಂಗು "ಭಲಾ ಭಲಾ" ಎನ್ನುತ್ತಿರುವನು. ಗೋಬೆಲ್ "ತಕಕ್ಷೈತಕತೈ" ಎನ್ನುತ್ತಿರುವನು. ಈ ಆಟಗಳಾಗಲಿ ಈ ಕುಣಿತಗಳಾಗಲಿ ಇನ್ನು ಉಪಯೋಗಕರವಾಗಲಾರವೆಂಬ ವಿಷಯವನ್ನು ಅವರು ತೀಕ್ಷ್ಣದಲ್ಲಿಯೇ ಗ್ರಹಿಸುವರು.

ಇದುವರೆಗೂ ರಷಾದ ನೇಲೆ ಐದು ಬಾರಿ ದಂಡಯಾತ್ರೆಗಳು ನಡೆದವು. ಪ್ರತಿ ಬಾರಿಯೂ ಜರ್ಮನರು ಪ್ರಥಮದಲ್ಲಿ ಗೆದ್ದು ಆ ಮೇಲೆ ಪರಾಜಿತರಾಗಿ ಓಡಿ ಹೋಗಿರುವರು. ಈ ಬಾರಿಯ ದಂಡೆಯಾತ್ರೆಯಲ್ಲಿಯೂ ರಷ್ಯನರು ಪ್ರಥಮದಲ್ಲಿ ಸೋತರೂ ಈಗ ಆ ಸೇಡನ್ನು ಅತಿ ಉಗ್ರರೀತಿಯಲ್ಲಿಯೇ ತೀರಿಸಿಕೊಳ್ಳುತ್ತಿರುವರು. "ಖಬರ್‌ದಾರ್! ಇನ್ನು ರಷ್ಯನರ ಮಾತಿಗೆ ಬಂದೀಯಾ" ಎಂದು ಹೇಳುತ್ತಿರುವಂತೆ ನಾಜಿಗಳ ಹೃದಯದಲ್ಲಿ ರಷ್ಯನರ ಅಂತರ್ವಾಣಿಯು ಪ್ರತಿಧ್ವನಿಸುತ್ತಿರುವದು.

ಭಾರತವೂ ಅಮೇರಿಕಾವು

ಹಿಂದೂದೇಶದ ಮಟ್ಟಿಗೆ ಅಮೇರಿಕಾವು ಕುತೂಹಲವುಳ್ಳವರಾಗಿರಬೇಕಾದುದು ಹಿಂದೂದೇಶದಿಂದ ದೊರೆಯುವ ವ್ಯಾಪಾರಸೌಕರ್ಯಕ್ಕಾಗಿ ಅಲ್ಲ. ಅಮೇರಿಕಾದ್ರವ್ಯ ಪ್ರಯತ್ನವು ಯುದ್ಧದಲ್ಲಿ ಜಪಾನರನ್ನು ಗೆಲ್ಲುವದು; ಈ ಧ್ಯೇಯಕ್ಕಾಗಿ ಹಿಂದೂದೇಶದ ಸಹಾಯವನ್ನು ಪೂರ್ಣ ಉಪಯೋಗಿಸಿಕೊಳ್ಳುವದು. ಹಿಂದೂದೇಶದ ರಾಜಕೀಯ ಸಮಸ್ಯೆ ಒಗೆ ಹರಿದರೇನೇ ಹಿಂದೀಯರ ಪೂರ್ಣ ಸಹಾಯ ದೊರೆಯುವುದೆಂಬುದು ಅಮೆರಿಕನರಿಗೆ ತಿಳಿದಿದೆ. ಅದ್ದರಿಂದಲೇ ಪ್ರೆಸಿಡೆಂಟ್ ರೂಸ್‌ವೆಲ್ಟರು ಹಿಂದೀಯರ ಒಗ್ಗೆ ಸಾಧು ಧೋರಣೆಯನ್ನು ತಳೆದಿದ್ದಾರೆ. ಅವರ ಗ್ವಾಡಿ ಸಮಿತಿಯನ್ನು ಇಲ್ಲಿಗೆ ಕಳುಹಿಸಿದ್ದು, ಚಾನ್‌ಸನ್ನರನ್ನು ಮತ್ತೆ ಈಗ ವಿಲಿಯಮ್ ಫಿಲಿಪ್ಸರನ್ನು ಕಳುಹಿಸಿರುವದು ಈ ದೃಷ್ಟಿಯಿಂದ. ಅಟ್ಲಾಂಟಿಕ್ ಘೋಷಣೆಯೂ ಹಿಂದೂದೇಶಕ್ಕೂ ಅನ್ವಯಿಸುತ್ತದೆಂದು ಅವರು ಸಾರಿದ್ದಾದರೂ ಈ ದೃಷ್ಟಿಯಿಂದಲೇ ಅನ್ನಬಹುದು. ಹಿಂದೂದೇಶವು ಅಕ್ಷರಾಷ್ಟ್ರಗಳ ತತ್ವಕ್ಕೆ ತೀರಾ ವಿರೋಧಿ. ಮಿತ್ರರಾಷ್ಟ್ರಗಳಿಗೆ ಪಾರಾಯ ಮಾಡುವ ಪೂರ್ಣಬಯಕೆ ಅದಕ್ಕಿದೆ. ಆದರೆ ಮಿತ್ರರಾಷ್ಟ್ರಗಳು ಹಿಂದೂದೇಶ

ಪುಸ್ತಕಕ್ಕೆ ಮುಟ್ಟುಗೋಲು

ಇಂಡಿಯಾ ದೇವೇಜ್‌ಡ್ ಎಂಬ ಪುಸ್ತಕವನ್ನು ಸರ್ಕಾರದವರು ಮುಟ್ಟುಕೋಲು ಹಾಕಿರುವರು. ಈ ಪುಸ್ತಕದ ಮೇಲೆ ಮುದ್ರಣಕಾರರ ಹೆಸರಿಲ್ಲ. ಎಲ್ಲಿ ಮುದ್ರಿತವಾಯಿತೋ ಗೊತ್ತಿಲ್ಲ.

ಸತ್ತು ಬದುಕಿದ ಹಡಗು

ಪೆಸಿಫಿಕ್ ಅಟ್ಲಾಂಟಿಕ್‌ನಲ್ಲಿ ಒಂದು ಆಂಗ್ಲೇಯರ ಹಡಗಿಗೆ ಡಿಸಂಬರ್‌ನಲ್ಲಿ ಜರ್ಮನಿಯವರು ಗುಂಡು ಹೊಡೆದು ದೊಡ್ಡ ತೂತು ಮಾಡಿದರು. ಅದು ಇದುವರಿಗೆ ನೀರಿನಲ್ಲಿ ತೇಲುತ್ತಾ ಇತ್ತು. ಈಗ ಇದು ಅಮೆರಿಕಾದಲ್ಲಿ ದಡಕ್ಕೆ ಬಂದಿರುತ್ತೆ.

ವು ಹೃತ್ಪೂರ್ವಕವಾಗಿ ಸಹಾಯ ನೀಡುವಂಥಾ ವಾತಾವರಣವನ್ನು ಕಲ್ಪಿಸಲ್ಲ. ಅಮೇರಿಕನರಿಗೆ ಹಿಂದೂದೇಶದ ವಿಚಾರ ತಿಳಿಯುದ್ದಲ್ಲ. ಇಲ್ಲಿಯ ಪರಿಸ್ಥಿತಿಯನ್ನು ಪೂರ್ಣವಾಗಿ ಅಭ್ಯಸಿಸಿದ ವೆಂಡೆಲ್ ವಿಲ್ಕಿ, ಲೂಯಿಫಿಶ್ಚರ್, ಮಿಸ್ ಪರ್ಲ್‌ಬಕ್ ಇನ್ನೂ ಅನೇಕರ ಹಿಂದೂದೇಶದ ವಿಚಾರ ಲೇಖನಗಳನ್ನು ಓದಿದ ಅಮೇರಿಕನರು ಬ್ರಿಟಿಷರು ಯಾವ ರೀತಿಯ ವಿರೋಧ ಪ್ರಚಾರವನ್ನು ಕೈಗೊಂಡರೂ ಅದನ್ನು ನಂಬುವರೇ? (ಕೂ).

'ಸತ್ಯವಾದಿ'ಗೆ ಚಂದಾದಾರರಾಗಿರಿ.

—ರಾಜಧಾನಿ—

(ಸ್ವಂ.ಸು.) ಮೈಸೂರು, ಫೆ. 17

ಶ್ರೀ ಕೃಷ್ಣರಾಜೇಂದ್ರ ಹತ್ತಿ ಗಿರಣಿಯ ಶೇರುದಾರರುಗಳ 22 ನೇ ಸಾಧಾರಣ ಜನರಲ್ ಬಾಡಿ ಮೀಟಿಂಗು ಮಾರ್ಚಿ ತಾ|| 16—3—43 ನೇ ಶನಿವಾರ ಚಾಮರಾಜ ರೋಡಿನಲ್ಲಿರುವ ಪಂಪ್ಲರ ಸಹಾಯಕ ಭವನದಲ್ಲಿ ಸಾಯಂಕಾಲ ಐದು ಗಂಟೆಗೆ ನಡೆಯುತ್ತದೆ.

ಇದೇ ತಾ| 20 ನೇ ಶನಿವಾರದಿಂದ ಬೀನಸರಾಯ್ ಸಕಟ್ಟೆಯಲ್ಲಿ ಬೊಂಬಾಯಿ ಜೆ ಎ ಸರ್ಕಸ್ ಮಂಡಳಿಯವರು ತಮ್ಮ ಆಟವನ್ನು ಪ್ರದರ್ಶಿಸುತ್ತಾರೆ.

ಹಿಂಜಿ ರಾಜಧಾನಿಯ ವಿದ್ಯಾರ್ಥಿಗಳ ಗಲಾಟೆಯಲ್ಲಿ ಅವರಿಗೆ ಸಹಾಯಕರಾಗಿದ್ದು ಮತ್ತು ಅತನ ಮೇಲೆ ಹೊರಟಿದ್ದ ವಾರಂಟಿಗೆ ತಪ್ಪಿಸಿಕೊಂಡಿದ್ದ ಶ್ರೀ ಕೃಷ್ಣಪ್ಪ ಎಂಬ ಮಹಾದಾಚರ ಕಾಲೇಜು ವಿದ್ಯಾರ್ಥಿಯನ್ನು ಪೊಸ್ಟಿ ಸಾಯಂಕಾಲ ವೇಲ್ಕಂಡ ಕಾಲೇಜಿನ ಯೂನಿಯನ್ ಸಂಘದಲ್ಲಿ ಸೆರೆ ಹಿಡಿದರು.

ವರ್ತಕರು ಚಿಲ್ಲರೆ ಅಭಾವದಿಂದ ಸ್ವಂತ ಹುಂಡಿಗಳನ್ನು ವಿರ್ಪಡಿಸುತ್ತಿರುವುದು ಬಹಳ ತೊಂದರೆಯಾಗಿದೆ. ಇದರಿಂದ ಚೀರಿ ವ್ಯಾಪಾರ ತೆಗೆದುಕೊಳ್ಳಲು ಕೈಲಿ ದುಡ್ಡಿಲ್ಲದೆ ಹೋಗುತ್ತೆ.

ಸಂಸ್ಥಾನದ ಸುದ್ದಿಗಳು

ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಆರ್ಯಂಬ ಭವನ ಹೋಟಲು ಮತ್ತು ಗೋದೋಕ್ ನಲ್ಲಿ ಶೇಕರಿಸಲ್ಪಟ್ಟಿದ್ದ 20 ಮೂಟೆ ಸಕ್ಕರೆ ಮತ್ತು 287 ಮೂಟೆ ನಾನಾವಿಧದ ಅಕ್ಕಿ ಪತ್ತೆಯಾಗಿರುವುದಾಗಿಯೂ ಮುಂದಿನ ಕ್ರಮ ನಡೆಸುತ್ತಿರುವರೆಂದೂ ತಿಳಿದುಬಂದಿದೆ

ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಡೆಟೆನ್ಯೂ ಆಗಿರುವ ಶ್ರೀಮತಿ ರತ್ನಮ್ಮ ಮಾಧವರಾಯರನ್ನು ಒಂದು ತಿಂಗಳು ಪೆರೋಲ್ ಮೇಲೆ ಬಿಡುಗಡೆ ಮಾಡುವರೆಂದು ತಿಳಿದುಬಂದಿದೆ.

ಇಂಡಿಯಾ ಸರ್ಕಾರವು ಮೈಸೂರು ಸಂಸ್ಥಾನಕ್ಕೆ ಸಧ್ಯ 300 ಟ್ಯಾ ಗೋಧಿ ಸರಪರಾಜು ಮಾಡುವರೆಂದೂ, ಇವನ್ನು ಸಿವಿಲ್ ಸಪ್ಲೈಸ್ ಡೈರೆಕ್ಟರು ಒಪ್ಪಿಗುವರೆಂದೂ ಗೊತ್ತಾಗಿದೆ.

ಮಹಾತ್ಮಾ ಗಾಂಧಿಯವರ ಉಪವಾಸದ ಬಗ್ಗೆ ತಮ್ಮ ಸಹಾನುಭೂತಿ ವ್ಯಕ್ತಪಡಿಸಲು, ಚಿತ್ರದುರ್ಗದ ಜಿಲ್ಲಾ ಲಾಕಪ್‌ನಲ್ಲಿರುವ ಕೆಲವು ಮಂದಿ ರಾಜಕೀಯ ಖೈದಿಗಳು ಒಂದು ದಿನದ ಉಪವಾಸವನ್ನಾಚರಿಸಿದರೆಂದು ತಿಳಿಯಬಂದಿದೆ.

ಹಿಂದೂಸ್ಥಾನದ ಯುದ್ಧ ಪ್ರಯತ್ನ

ಯುದ್ಧ ಪ್ರಾರಂಭವಾಗುವಾಗ 170,000 ಇದ್ದ ಸೈನ್ಯ ಸಂಖ್ಯೆ ಇಂದು 1,250,000 ಕ್ಕೇರಿದೆಯೆಂದೂ (ಹೊರಗೆ ಹೋಗಿರುವ 300000 ಯೋಧರನ್ನೂ ನೌಕಾ ದಳದಲ್ಲಿರುವ 40,000 ಜನರನ್ನೂ ಬಿಟ್ಟು) ಸೈನ್ಯಕ್ಕೆ ಜನರು ತಮ್ಮ ಸ್ವಂತ ಲಾಭಸಾಧ್ಯದಿಂದ ಬಂದು ಸೇರುತ್ತಿರುವರೆಂದೂ ವಿವರಿಸಿದೆ. ನಿಜ, ಸೈನ್ಯಕ್ಕೆ ಜನರು ಸೇರುತ್ತಿರುವುದು ಕೇವಲ ಇಂದು ಭಾರತದಲ್ಲಿ ಪ್ರಸರಿಸಿರುವ ದಾರುಣವಾದ ಬಡತನದ ದೆಸೆಯಿಂದ ಯುದ್ಧ ಪ್ರಾರಂಭದಲ್ಲಿ ಕೇವಲ 6000 ಟ್ಯಾ ಇದ್ದ ನೌಕಾ ದಳವು ಇದರ 100 ಪಾಲು ಹೆಚ್ಚಿದೆಯೆಂದರೆ ಸರ್ವರೂ ಭೀಷ್ ಎನ್ನತಕ್ಕಂತಾದ್ದೆ. ನೌಕಾ ದಳವೂ, ಹಿಂದೂ ವಿಮಾನ ದಳವೂ ಹಿಂದೀಯರದ್ದೇ ಅನ್ನುತ್ತಾರೆ. ಆದರೆ ಅದರಲ್ಲಿರುವ ಅಧಿಕಾರಿಗಳು ಪ್ರಾಮುಖ್ಯವಾಗಿ ಬ್ರಿಟಿಷರು ಇರಲಿ ಈ ಪುಸ್ತಕವನ್ನು ಓದುವ ಅಮೇರಿಕನ್ನರು ಅಸಂಖ್ಯಾತವಾದ ಜನ, ಧನಸಂಪತ್ತಿನಿಂದ ಕೂಡಿದ ಭಾರತದಂಥಾ ಆದ್ವಿತೀಯ ರಾಷ್ಟ್ರವನ್ನು ನಾಡಿದ (ಪುಸ್ತಕದಲ್ಲಿ ಸೂಚಿಸಲ್ಪಟ್ಟ) ಕಾರ್ಯಕ್ರಮವನ್ನು ನೋಡಿ ನಗಲೇ ಬೇಕು. ಈ ಯುದ್ಧದ ಸಂದರ್ಭದಲ್ಲಿ ದಿನದಿನಕ್ಕೆ ಹದ್ದು ಏರಿ ರಾಷ್ಟ್ರಗಳು ಸರ್ವದೇಶಗಳಲ್ಲಿ ಮುಂದುವರಿಯುತ್ತಿರುವಾಗ ಇದು ಭಾರತದ ಚಿತ್ರ. (ಕೊ)

ಭತ್ತದ ಬೆಳೆ

ಇಂಡಿಯಾದಲ್ಲಿ ಎಕರೆಗೆ ಸರಾಸರಿ 988 ಪೌಂಡುಗಳ ಭತ್ತವನ್ನು ಬೆಳೆಯುವನೆರು, ಜಪಾನೀಯರಾದರೋ ಎಕರೆಗೆ 3070 ಪೌಂ. ಚೀನೀಯರು 2433 ಪೌಂಡುಗಳಷ್ಟು ಭತ್ತವನ್ನು ಪ್ರತಿ ಎಕರೆಯಲ್ಲಿಯೂ ಬೆಳೆಯುತ್ತಿರುವರು. ವ್ಯವಸಾಯಾಭಿವೃದ್ಧಿಯಾಗದೆ ಇಂಡಿಯಾವು ಸ್ವತಂತ್ರವಾಗಿರಲಾರದು.

ಜರ್ಮನ್ ಸೈನ್ಯಾಧಿಪತ್ಯದಲ್ಲಿ ಒದಲಾವಣೆ ಮಾಡಿ ಡಿಫೆನ್ಸ್ ಕೌನ್ಸಿಲ್ಲುಗಳನ್ನು ಸ್ಥಾಪಿಸುವ ವಿಚಾರಣೆಯನ್ನು ಹಿಟ್ಲರ್ ನಡೆಸುತ್ತಿದ್ದಾನೆ.

ಂ ಂ ಂ

ಸೆಬಾಸ್ಟೊಪೂಲನ್ನು ರಷ್ಯನರು ತೆಗೆದುಕೊಳ್ಳುವ ಪ್ರಯತ್ನ ನಡೆಸುವುದಾಗಿ ತಿಳಿಯಬಂದಿದೆ. ಇದು ಸಿಕ್ಕಿದರೆ ಕಪ್ಪು ಕಡಲಿನಲ್ಲಿ ರಷ್ಯಾ ನೌಕಾಧಿಪತ್ಯ ದೊರೆಯುವುದು.

ಂ ಂ ಂ

ಮದರಾಸ್ ಸೆಕ್ರಟೇರಿಯಟ್ಟನ್ನು ವಿದ್ಯಾರ್ಥಿಗಳು ಪಿಕೆಟ್ ಮಾಡಿದರು. ನಾಲ್ಕು ಮಂದಿ ದಸ್ತಗಿರಿಯಾಗಿದ್ದಾರೆ. ಮಿಕ್ಕವರು ಚದುರಿಸಲ್ಪಟ್ಟರು

ಖಾರ್ಕೋವ್

ಖಾರ್ಕೋವ್ ಪಟ್ಟಣವು ರಷ್ಯನರ ಪರಾಭವಾಗದಿರುವುದು ಈ ವೇಳೆಗೆ ಇದು ರಾಸ್ತೋವ್ ನಗರಕ್ಕಿಂತ ದೊಡ್ಡದು. ಇಲ್ಲಿ ಯುದ್ಧ ಪ್ರಾರಂಭವಾಗಿ ಐದು ದಿವಸಗಳಾಯಿತು. ಇದು ಯುಕ್ರೇನ್ ಪ್ರಾಂತದ ರಾಜಧಾನಿ. ಇದರ ಸುತ್ತಲೂ ಮೂರು ನದಿಗಳಿವೆ. ರೈಲ್ವೆ ಜಂಕ್ಷನ್, ಇಲ್ಲಿ ಕಬ್ಬಿಣದ ಭಾರಿ ಭಾರಿ ಕಾರ್ಖಾನೆಗಳಿವೆ ವಿಮಾನಗಳ ನಿಲ್ದಾಣಗಳೂ ಇವೆ. ಇದು ರಷ್ಯನರ ವಶವಾದರೆ ಜರ್ಮನರಿಗೆ ತುಂಬಾ ಅನಾನುಕೂಲ. ಹಿಟ್ಲರನ ಈಗ ಮುಖ್ಯ ಸೈನ್ಯಾಧಿಪತಿಯಾಗಿರುವನಷ್ಟೆ. ಜರ್ಮನರು ದಿನೇ ದಿನೇ ಕ್ಷಯಿಸುತ್ತಿರುವುದರಿಂದ ತನ್ನ ಸೈನ್ಯದ ಅಧಿಕಾರವನ್ನು ಇತರರಿಗೆ ಕೊಡುತ್ತಾರೆಂದು ವದಂತಿಸಲಾಗಿದೆ.

ಚಿಲ್ಲರೆ ಪತ್ತೆಗೆ ಬಹುಮಾನ

ಡಾರ್ಜಲಿಂಗ್ ಪೋಲೀಸಿನವರು ಯಾರು ಚಿಲ್ಲರೆ ನಾಣ್ಯಗಳನ್ನು ಕೂಡಿಹಾಕಿತ್ತಾರೋ ಅಂಥವರನ್ನು ಪತ್ತೆ ಹಚ್ಚಿ ಕೊಟ್ಟರೆ ಶೇಕಡ ಹತ್ತರಂತೆ ಬಹುಮಾನ ಕೊಡುವರಂತೆ.

ಗುಜರಾತ್ ರೈಲ್ವೆ ಕಂಪನಿಯೊಡನೆ ಇಂಡಿಯಾ ಸರ್ಕಾರ ಮಾಡಿಕೊಂಡಿರುವ ಕರಾರು ಒರುವ ಮಾರ್ಚಿ 31ಕ್ಕೆ ನುಗಿಯುವುದು.

ವಿವಿಧ ವರ್ತಮಾನ

ಒಂದು ಎಕರೆ ಜಮೀನಿನಲ್ಲಿ ಆಲೂಗೆಡ್ಡೆಯನ್ನು ಬೆಳೆದರೆ, ಗೋಧಿ ಬೆಳೆದದ್ದಕ್ಕಿಂತ ಐದಾರುಷ್ಟು ಬೆಳೆಯಾಗಿ ಜನರಿಗೆ ಆಹಾರವಾಗುವುದು.

ಂ ಂ ಂ

ಸೊಯಬೀನ್ ಚೈನಾದ ಮುಖ್ಯ ಬೆಳೆ. ಎತ್ತು ಮುಖ ಆಹಾರವಾಗಿದೆ. ಇದರಲ್ಲಿ ಎಲ್ಲಾ ಒಗೆಯ ವಿಟಮಿನ್‌ಗಳಿವೆ.

ಂ ಂ ಂ

ಮಿಲ್ಲುಗಳಲ್ಲಿ ಜೀಸಿದ ಅಕ್ಕಿಯಾಗಲಿ ಗೋಧಿಯಾಗಲಿ ಒಳ್ಳೆದಲ್ಲ ಅದರಲ್ಲಿನ ಬೆ ಪಟವಿನ್ ನಷ್ಟವಾಗಿರುತ್ತೆ. ಜರ್ಮನಿಯಲ್ಲಿ ಹಿಟ್ಟುಮಾಡದಿರುವ ಗೋಧಿಯನ್ನೇ ತಿನ್ನಬೇಕೆಂದು ನಿಯಮವಾಗಿದೆ.

ಂ ಂ ಂ

ಪಂಜಾಬಿನಲ್ಲಿ ಅಲ್ಲಿಯವರಿಗೆ ಆಗಿ ಬಿಗುವುದು 296000 ಟ್ಯಾ ಗೋಧಿ. ಬಂಗಾಳಾದಲ್ಲಿ 135100 ಟ್ಯಾ ಅಕ್ಕಿ ಉಳಿಯುವುದು;

ಂ ಂ ಂ

ಹಿಂದೂಸ್ಥಾನದಲ್ಲಿ ವರ್ಷಕ್ಕೆ 100 ಲಕ್ಷ ಟ್ಯಾ ಗೋಧಿ ಬೆಳೆಯುತ್ತಾರೆ. ಈ ವರ್ಷ ಇನ್ನೂ ಹೆಚ್ಚಾಗಿ 70000 ಟ್ಯಾ ಉತ್ಪತ್ತಿಯಾಯಿತು.

ಂ ಂ ಂ

ಫಿಲೆಂಡಿಗೆ ಮಿಲ್ ರೈಟಿಯವರು ಅಸ್ಪೃಶ್ಯರಾಗಿ ಚಿತ್ರಿಸಲ್ಪಟ್ಟಿರುವರು.

ನಿಮ್ಮ ಊರಿನ ಮೆಚ್ಚಿನ ಚಲನ ಚಿತ್ರ ಮಂದಿರಗಳಲ್ಲಿ ವಿಮರ್ಶನೋಡಿ

— ಹೆಚ್ ಆರ್. ಜಿ. ಸಿ. ಯವರ —

ಶ್ರೀ ವಿಷ್ಣು ರ್ಸ್

ಗಾಂಧಿಸ್ಕೆಚರ್, ಮೈಸೂರು ಇವರ ಸಂಗೀತರತ್ನ ಅಸಾಧಾರಣ ವಿದ್ವಾನ್ ಟಿ ಚೌಡಯ್ಯನವರು, ಕಲ್ಚರ್ಡ್ ಕಮೆಡಿಯನ್ ಕೆ ಹಿರಣ್ಣಯ್ಯನವರು ಅಭಿನಯಿಸಿರುವ

ವಾಣಿ or (VIOLINIST)

ಎಂಬ ಸಮಾಜ ಚಿತ್ರ

ಶ್ರೀದೇವಿ ಆರ್ಟ್ಸ್

ಅಂದವಾದ ಬೋರ್ಡುಗಳು ಬರೆಯಲ್ಪಡುತ್ತವೆ. ಎಲ್ಲಾ ತರಹದ ಚಿತ್ರಕೆಲಸಗಳೂ ಮಾಡಲ್ಪಡುತ್ತವೆ ಸುಲಭ ದರಗಳು. 438 ಚಾಮರಾಜರೋಡ್, ಮೈಸೂರು ಮಂಗಳೂರು ಗಣಪತಿ, ಸುವರ್ಣಾ ಗಜಾನನ ಬೀಡಿಗಳನ್ನೆಲ್ಲಾ ಉಪಯೋಗಿಸಿ

ಅಕ್ಕರ

ಸಾರ್ವಜನಿಕ

ಭಾವಪರಿಪೂರ್ಣವಾದ ಕಥೆ ಓದಲು ಪ್ರಾರಂಭಿಸಿದರೆ ಕಥೆ ಪೂರೈಸುವವರೆಗೂ ಊಟಕ್ಕೆ ಕೊಡ ಏಳಲು ಮನಸ್ಸಾಗುವುದಿಲ್ಲ. ಬೆಲೆ 6 ಆಣೆ ಪೋಸ್ಟೇಜ್ 1 ಆಣೆ. ಮುಂಗಡ ಕಳುಹಿಸಬೇಕು

ಸ್ವತ್ವವಾದಿ ಆಫೀಸ್ ಮೈಸೂರು

ಆಪೆರ — ಶೋಭ

ತಾ || 18 ರಿಂದ

ಪ್ರತಿ ದಿನ ಮೂರು ಆಟಗಳು



ಶೋಭನಸಮರ್ಥ, ಸಾಹಸ ಮೋದಕ ಮುಬಾರಕ್ ಪಾತ್ರವಹಿಸಿದವರು

HOTEL PARADISE

D. Subbiah Road, Mysore paovides you with comfortable and homely meals

Edited, Printed & pnblished by M. S. Krishna Rao, at the Satyavadi P r e s s. Chamaraja Agrahar, Mysore.